# ಕರ್ನಾಟಕ ಸರ್ಕಾರ

ಗ್ರಾಅಪ 53 ಜೈಅಯೋ 2010(ಪಿ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 07.01.2013

ಇವರಿಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ವಿಷಯ ದಿನಾಂಕ 17.12.2012 ರಂದು ನಡೆದ ಗ್ರಾಇಂಕಾ ಪರಿಶೀಲನಾ ಸಭೆಯ ನಡವಳಿಯನ್ವಯ

ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 17.12.2012 ರಂದು ನಡೆದ ಗ್ರಾಇಂಕಾ ಪರಿಶೀಲನಾ ಸಭೆಯಲ್ಲಿ ಕೈಗೊಂಡ ಈ ಕೆಳಕಂಡ ತೀರ್ಮಾನಗಳನ್ವಯ ಸೂಕ್ತ ಕ್ರಮವಹಿಸುವಂತೆ ಕೋರಿದೆ.

- 2012-13ನೇ ಸಾಲಿನಲ್ಲಿ ನಿಗದಿ ಪಡಿಸಿದ ಗುರಿ, ಸಾಧಿಸಿದ ಪ್ರಗತಿ, ಬಿಡುಗಡೆಯಾದ ಅನುದಾನ (ಕೇಂದ್ರ ಹಾಗೂ ರಾಜ್ಯ) ಬಿಡುಗಡೆಗೆ ಬಾಕಿ ಇರುವ ಅನಿಲ ಸ್ಥಾವರಗಳ ಸಂಖ್ಯೆ ಹಾಗೂ ಕೇಂದ್ರ ಹಾಗೂ ರಾಜ್ಯ ಸಹಾಯಧನದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.
- ಪ್ರತಿ ಜಿಲ್ಲೆಯಲ್ಲಿನ ಟರ್ನ ಕೀ ವರ್ಕರ್ಸ್/ಏಜನ್ಸಿಯವರ ವಿವರಗಳನ್ನು ನೀಡುವಂತೆ ಸೂಚಿಸುತ್ತಾ ಟರ್ನ ಕೀ ವರ್ಕರ್ಸ್ ಹಾಗೂ ಗಾರೆ ಕೆಲಸಗಾರರಿಗೆ ತರಬೇತಿ ಪಡೆಯುವ ಅಗತ್ಯತೆ ಇದ್ದಲ್ಲಿ ಪೂರ್ಣ ವಿವರವನ್ನೊಳಗೊಂಡ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದು.
- ಬಾಗಲಕೋಟೆ, ಬೆಳಗಾಂ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾವೇರಿ, ಕೊಡಗು, ರಾಮನಗರ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತ್‌ಗಳು ಉತ್ತಮ ಪ್ರಗತಿ ಸಾಧಿಸಿದ್ದು, ಪೂರ್ಣ ಪ್ರಮಾಣದಲ್ಲಿ ಗುರಿಗನುಗುಣವಾಗಿ ಪ್ರಗತಿ ಸಾಧಿಸುವುದು
- ಬೀದರ್, ಬಿಜಾಪುರ, ಚಾಮರಾಜನಗರ, ದಕ್ಷಿಣ ಕನ್ನಡ, ಗುಲ್ಬರ್ಗಾ, ಹಾಸನ ಮೈಸೂರು, ಉಡುಪಿ, ಗದಗ, ಉತ್ತರ ಕನ್ನಡ, ರಾಯಚೂರು, ಯಾದಗೀರ್ ಜಿಲ್ಲೆಗಳ ಪ್ರಗತಿ ಬಹಳ ಕಡಿಮೆ ಇದ್ದು, ಈ ಬಗ್ಗೆ ತ್ವರಿತವಾಗಿ ಕ್ರಮವಹಿಸಿ ನಿಗದಿ ಪಡಿಸಿದ ಗುರಿಯನ್ನು ಪೂರ್ಣಗೊಳಿಸುವುದಾಗಿ ಯೋಜನಾ ಅಭಿಯಂತರರು ತಿಳಿಸಿರುವ ನಿಟ್ಟಿನಲ್ಲಿ ಕೂಡಲೇ ಕ್ರಮವಹಿಸುವುದು.

- ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಕೋಲಾರ, ಬಳ್ಳಾರಿ, ಕೊಪ್ಪಳ ಮತ್ತು ಮಂಡ್ಯ ಜಿಲ್ಲಾ ಪಂಚಾಯತ್‌ಗಳ ಪ್ರಗತಿ ತೃಪ್ತಿಕರವಾಗಿರುವುದಿಲ್ಲ. ಈ ಕುರಿತು ಸಂಬಂಧಿತ ಜಿಲ್ಲಾ ಪಂಚಾಯತ್‌ಗಳು ಕೂಡಲೇ ಸೂಕ್ತ ಕ್ರಮ ವಹಿಸುವುದು.
- ದಾವಣಗೆರೆ, ರಾಮನಗರ, ಉಡುಪಿ, ಕೊಪ್ಪಳ, ಮಂಡ್ಯ ಮತ್ತು ಕೊಡಗು ಜಿಲ್ಲಾ ಪಂಚಾಯತ್‌ಗಳು. 2011--12ನೇ ಸಾಲಿನಲ್ಲಿ ರಾಜ್ಯೆಅಕಾ ದ ಹಣಬಳಕೆ ಪ್ರಮಾಣ ಪತ್ರದಲ್ಲಿ ಕಂಡು ಬಂದ ನ್ಯೂನತೆ/ವ್ಯತ್ಯಾಸಗಳಿಗೆ ಪರಿಷ್ಕೃತ ಮಾಹಿತಿಯನ್ನು ಕೂಡಲೇ ಸಲ್ಲಿಸಲು ಕ್ರಮ ವಹಿಸುವುದು.
- ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 2011–12ನೇ ಸಾಲಿಗೆ ಸಂಬಂಧಿಸಿದಂತೆ ಸೌರಬೆಳಕು ಯೋಜನೆಯಡಿ ಸೌರಬೀದಿ ದೀಪಗಳ ಅನುಷ್ಠಾನ ಕಾರ್ಯಪೂರ್ಣಗೊಳಿಸಿ ವರದಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.
- ಗುಲ್ಬರ್ಗಾ ಮತ್ತು ಯಾದಗೀರ್ ಜಿಲ್ಲಾ ಪಂಚಾಯತ್‌ಗಳಿಗೆ ಅನುಕ್ರಮವಾಗಿ ಬೀದರ್ ಹಾಗೂ ರಾಯಚೂರು ಜಿಲ್ಲಾ ಪಂಚಾಯತ್‌ಗಳಲ್ಲಿನ ಗ್ರಾಮೀಣ ಇಂಧನ ಕಾರ್ಯಕ್ರಮದ ಉಸ್ತುವಾರಿ ನಿರ್ವಹಿಸುತ್ತಿರುವ ಯೋಜನಾ ಅಭಿಯಂತರರಿಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದ್ದರೂ ಸಹ ಸಂಬಂಧಿತ ಯೋಜನಾ ಅಭಿಯಂತರರು ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸದೇ ಪರ್ಯಾಯ ವ್ಯವಸ್ಥೆಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಕುರಿತು ಅನುಭವವಿಲ್ಲದ ವಿವಿಧ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ಕಾರ್ಯಕ್ರಮದ ಅನುಷ್ಠಾನಕ್ಕೆ ಧಕ್ಕೆಯುಂಟಾಗುತ್ತಿದೆ. ಆದ್ದರಿಂದ ಸರ್ಕಾರದ ಆದೇಶದನ್ವಯ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.
- ಗ್ರಾಮೀಣ ಇಂಧನ ಕಾರ್ಯಕ್ರಮದಡಿ ನಿರ್ವಹಿಸಲಾಗುವ ಎಲ್ಲಾ ಯೋಜನೆಗಳನ್ನು ಸರ್ಕಾರದಿಂದ ಹೊರಡಿಸಲಾದ, ಮಾರ್ಗಸೂಚಿ, ಸುತ್ತೋಲೆ, ಆದೇಶದನ್ವಯ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.

ತಮ್ಮ ವಿಶ್ವಾಸಿ,

(ಎಲ್.ದೀಪಾ) 10/1/13

ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ